ಒ ಎಸ್ ನಂ. 3/2019

ಡಿ ಡಬ್ಲೂ 1

ಸಾಕ್ಷಿಯನ್ನು ದಿನಾಂಕ 24-07-2024 ರಂದು ಪ್ರಮಾಣ ವಚನ ಭೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಎಸ್ ಸಿ ಕೆ ವಕೀಲರಿಂದ**

ನಾನು 10 ನೇ ತರಗತಿ ಓದಿದ್ದೇನೆ. ನಾನು 24 ವರ್ಷಗಳಿಂದ ಸರಕಾರಿ ಸೇವೆ ಮಾಡುತ್ತಿದ್ದೇನೆ. ಈ ಮೊದಲು ನಾನು ಜಂಬಗಿ ಪಿ ಡಿ ಒ ಅಂತಾ ಕೆಲಸ ಮಾಡಿದ್ದೇನೆ. ಮುತ್ತೂರ ಗ್ರಾಮ ಪಂಚಾಯತಿಯಲ್ಲಿ ಕಳೆದ 3 ವರ್ಷಗಳಿಂದ ಪಿ ಡಿ ಒ ಅಂತಾ ಕೆಲಸ ನಿರ್ವಹಿಸುತ್ತಾ ಇದ್ದೇನೆ. ವಾದಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದ್ದೇನೆ. ಸದರಿ ದಾಖಲೆಗಳಲ್ಲಿ ನಮ್ಮ ಕಚೇರಿಯಿಂದ ನೀಡಿದ ದಾಖಲೆಗಳು ಇವೆ ಎಂದರೆ ಸರಿ . ನನ್ನ ಪ್ರಮಾಣಪತ್ರದಲ್ಲಿ ಬರೆದಿರುವ ಮಾಹಿತಿ ನನಗೆ ಇದೆ. ನಿಪಿ -45 ರಂತೆ ಈಗ ನನಗೆ ಓದಿ ಹೇಳಿದಂತೆ ಗಾಂವಠಾಣ ಪ್ರದೇಶಗಳಲ್ಲಿ ಗಡಿ ಗುರುತಿಸುವ ಅಧಿಕಾರ ಪಿ ಡಿ ಒ ಗಳಿಗೆ ಇದೆ ಎಂದರೆ ಸರಿ . ನಿಪಿ-2 ರಲ್ಲಿ ನಮೂದಿಸಿದಂತೆ ನನ್ನ ಹಿಂದಿನ ಪಿ ಡಿ ಒ ಮತ್ತು ಪಂಚಾಯತಿ ಸದಸ್ಯರು ಸ್ಥಳಕ್ಕೆ ಭೇಟಿ ನೀಡಿ ವಿಪಿಸಿ ನಂ. 29 ನೇದ್ದನ್ನು ಅಳತೆ ಮಾಡಿ ಪೂರ್ವ ಪಶ್ಚಿಮ 73 ಅಡಿ ಉತ್ತರ ದಕ್ಷಿಣ 63 ಅಡಿ ಅಂತಾ ನಮೂದಿಸಿದ್ದಾರೆಂದರೆ ಸರಿ . ದಿಃ 14-11-2016 ರಂದು ಮೂತ್ತೂರ ಗ್ರಾಮ ಪಂಚಾಯತಿಯಲ್ಲಿ ಸಾಮಾನ್ಯ ಸಭೆ ನಡೆಯಿತು ಎಂದರೆ ಸರಿ . ಸದರಿ ಸಾಮಾನ್ಯ ಸಭೆಯಲ್ಲಿ ವಾದಿಯು ಸುಮಾರು ವರ್ಷಗಳಿಂದ ಸ್ವಾಧೀನದಲ್ಲಿರುವುದಾಗಿ ಠರಾವು ಪಾಸು ಮಾಡಲಾಗಿದೆ ಎಂದರೆ ಸರಿ . ಸದರಿ ಠರಾವಿನಲ್ಲಿ ವಾದಿಯು ಪ್ರತಿವರ್ಷ ಪಂಚಾಯತಿ ಕರ ತುಂಬುತ್ತಾರೆ ಅಂತಾ ನಮೂದಿಸಿದೆ ಎಂದರೆ ಸರಿ . ಸದರಿ ಠರಾವಿನಲ್ಲಿ 16 ಜನ ಸದಸ್ಯರ ಪೈಕಿ 10 ಜನ ಒಪ್ಪಿಕೊಂಡಿರುವುದಾಗಿ ನಮೂದು ಇದೆ ಎಂದರೆ ಸರಿ . ಠರಾವು ಪಾಸು ಮಾಡಿದ ನಂತರ ಸಂಬಂದಿಸಿದ ಭೂ ಇಲಾಖೆಗೆ ಅಳತೆ ಮಾಡಲು ಸೂಚಿಸುವಂತೆ ನಮೂದಿಸಿದೆ ಎಂದರೆ ಸರಿ . ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಖಂಡಿಕೆ 6 ರಲ್ಲಿ ಅಳತೆ ಮಾಡಿ ವರದಿ ಸಲ್ಲಿಸಿಲು ಸರ್ವೆಯರಗೆ ಸೂಚಿಸಿರುತ್ತಾರೆ ಅನ್ನುವ ಸಂಗತಿ ಸರಿ ಇರುವುದಿಲ್ಲ ಎಂದು ಬರೆಸಿದ್ದೀರಾ ಅಂದರೆ ಸಾಕ್ಷಿಯು 6 ಜನ ವಿರೋದಿಸಿದ್ದಕ್ಕೆ ಹಾಗೆ ಬರೆಸಿದ್ದೇನೆ ಅಂತಾ ಅನ್ನುತ್ತಾರೆ.

ಸದರಿ ಠರಾವು ಪಾಸು ಮಾಡಿದ ನಂತರ ದಿಃ 14-12-2016 ರಂದು ಸರ್ವೆ ಕಚೇರಿಗೆ ಪತ್ರ ಬರೆಯಲಾಗಿದೆ ಎಂದರೆ ಸರಿ . ನಿಪಿ-4 ರಲ್ಲಿ ನಮೂದಿಸಿದಂತೆ ಜಂಟಿಯಾಗಿ ಅಳತೆ ಕೆಲಸ ನಿರ್ವಹಿಸಿ ವರದಿಯನ್ನು ತಯಾರಿಸಿರುವುದಾಗಿ ನಮೂದು ಇದೆ ಎಂದರೆ ಸರಿ . ಅಳತೆ ಮಾಡಿದ ನಂತರ ದಿಃ 15-12-2016 ರಂದು ನಮ್ಮ ಕಚೇರಿಗೆ ವರದಿ ನೀಡಿದ್ದಾರೆಂದರೆ ಸರಿ ಸಾಕ್ಷಿಯು ಮುಂದುವರೆದು ಪ್ರತಿವಾದಿ ನಂ. 7 ಮತ್ತು 8 ತಕರಾರು ನೀಡಿದ್ದಾರೆ ಎನ್ನುತ್ತಾರೆ. ವರದಿ ನೀಡಿದ ನಂತರ ದಿಃ 26-12-2016 ರಂದು ಸಾಮಾನ್ಯ ಸಭೆ ನಡೆದಿದೆ ಎಂದರೆ ಸರಿ . ಸದರಿ ವರದಿಯಲ್ಲಿ ನಿಪಿ-3 ರಲ್ಲಿ ನಮೂದಿಸಿದಂತೆ ವಿಪಿಸಿ ನಂ. 29 ನೇದ್ದರ ವ್ಯಾಜ್ಯವನ್ನು ಕಾನೂನಿನ ಪ್ರಕಾರ ಸರಿಪಡಿಸಿಕೊಳ್ಳಲು ಸೂಚಿಸಿರುವುದಾಗಿ ನಮೂದಿಸಲಾಗಿದೆ ಎಂದರೆ ಸರಿ . ಆ ಸಮಯದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು ರಾಜೇಶ್ವರಿ ಚಂದು ಚಿನಗುಂಡಿ ಇದ್ದರು ಎಂದರೆ ಸರಿ . ರಾಜೇಶ್ವರಿ ಇವರು ಈಶ್ವರ ಮಲಕಪ್ಪ ಬಿರಾದಾರ ಇವರ ಮಗಳು ಅಂದರೆ ಸರಿ . ಈಶ್ವರ ಬಿರಾದಾರ ಇವರು 6 ನೇ ಪ್ರತಿವಾದಿ ಅಣ್ಣ ಅಂದರೆ ಸರಿ . ಈಶ್ವರ ಇವರು 3 ನೇ ಪ್ರತಿವಾದಿಗೆ ಬಾವನಾಗಬೇಕು ಎಂದರೆ ಸರಿ . 3 ಮತ್ತು 6 ನೇ ಪ್ರತಿವಾದಿ ಹಾಗೂ ರಾಜಕೀಯ ಒತ್ತಡದಿಂದ ದಿಃ 14-12-2016 ರ ವರದಿಯನ್ನು ಸ್ವೀಕರಿಸಿಲ್ಲವೆಂದರೆ ಸರಿಯಲ್ಲ.

ನಿಪಿ-7 ರಂತೆ ವಾದಿಯು ಮೇಲ್ಮನವಿ ಸಲ್ಲಿಸಿದ್ದಾರೆಂದರೆ ಸರಿ . ಸದರಿ ಪ್ರಕರಣದಲ್ಲಿ ಪಿಡಿಒ ಮೂತ್ತೂರ ಇವರು 1 ನೇ ಎದುರುದಾರರು ಇದ್ದಾರೆಂದರೆ ಸರಿ . ನಿಪಿ-14 ರಿಂದ 19 ರಶೀದಿಗಳು ದಾವಾಸ್ತಿಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ . ವಾದಿಯು ದಾವಾಸ್ತಿಗೆ ಸಂಬಂದಿಸಿದಂತೆ 2020 ರಿಂದ 2023 ರವರೆಗೆ ಕರ ತುಂಬಿದ್ದಾರೆಂದರೆ ಸರಿ ಈಗ ನನಗೆ ತೋರಿಸಿದ ರಶೀದಿಗಳು ಅವೇ ಇರುತ್ತವೆ ಅವುಗಳನ್ನು ನಿಪಿ-49 ರಿಂದ 51 ಎಂದು ಗುರುತಿಸಲಾಯಿತು. ಅಳತೆ ಮಾಡಿದ ನಂತರ ನಿಪಿ-5 ರಂತೆ ನಕ್ಷೆ ನೀಡಿದ್ದಾರೆಂದರೆ ಸರಿ . ನಿಪಿ-5 ರಲ್ಲಿ 7 ನೇ ಪ್ರತಿವಾದಿ ಅತಿಕ್ರಮಣ ಮಾಡಿ ಕಟ್ಟೆ ಕಟ್ಟಿರುವುದಾಗಿ ನಮೂದು ಇದೆ ಎಂದರೆ ಸಾಕ್ಷಿಯು ಪರಿಶೀಲನೆ ಮಾಡಬೇಕಾಗುತ್ತದೆ ಎನ್ನುತ್ತಾರೆ. ಅತಿಕ್ರಮಣದ ಕುರಿತು ನನಗೆ ಗೊತ್ತಿದ್ದರೂ ಕೂಡ ಈಗ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ 8 ನೇ ಪ್ರತಿವಾದಿ ಅತಿಕ್ರಮಣ ಮಾಡಿ ಗುಡಿಸಲು ಕಟ್ಟಿರುವುದಾಗಿ ನಮೂದು ಇದೆ ಎಂದರೆ ಸಾಕ್ಷಿಯು ಪರಿಶೀಲನೆ ಮಾಡಬೇಕಾಗುತ್ತದೆ ಎನ್ನುತ್ತಾರೆ. ನಿಪಿ-5 ದಾಖಲೆಯನ್ನು ನಾನು ಈ ಮೊದಲು ನೋಡಿದ್ದೇನೆ. ದಾಖಲೆ ನಾನು ಮೊದಲು ನೋಡಿದ್ದರೂ ಪರಿಶೀಲನೆ ಮಾಡಬೇಕು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ 14-11-2016 ರಂದು ಆಗಿರುವ ಠರಾವಿನಲ್ಲಿ ಅತಿಕ್ರಮಣ ಕುರಿತು ನಮೂದು ಇಲ್ಲವೆಂದರೆ ಸರಿ . ನಿಪಿ-5 ಮತ್ತು 6 ರಲ್ಲಿ ಅತಿಕ್ರಮಣ ಮಾಡಿರುವುದಾಗಿ ನಮೂದು ಇದೆ ಎಂದರೆ ಸರಿ. 7 ಮತ್ತು 8 ನೇ ಪ್ರತಿವಾದಿಯರು ಅತಿಕ್ರಮಣ ಮಾಡಿರುವ ವಿಷಯ ಗೊತ್ತಿದ್ದರೂ ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಸಮಯಕಾಶ ಕೇಳಿದ್ದು ನೀಡಿ ಮುಂದೂಡಲಾಯಿತು)

*Sd/-*

*PCJ & JMFC, Jamakhandi*